ನೀರು ಬೇಕೆಂದು ಕೇಳಿದಾಗ ಬಿಲ್ಲು ಬಿಟ್ಟು ನೀರು ಬರುವಂತೆ ಮಾಡಿದ ಸ್ಥಳವನ್ನು ರಾಮನ ಭಕ್ತರು 'ಧನುಷ್ಕೋಟಿ' ಎಂದು ಕರೆಯುತ್ತಿದ್ದರೆಂಬ ಐತಿಹ್ಯದ ಕಾರಣ ಈ ಜಲಪಾತಕ್ಕೆ ಧನುಷ್ಕೋಟಿ ಎಂದು ಕರೆಯುತ್ತಾರೆ. ಇಲ್ಲಿ ಕಾವೇರಿಯು ಬಳುಕುತ್ತಾ ಹರಿಯುವುದನ್ನು ದಂಡೆಯ ಮೇಲಿಂದ ವೀಕ್ಷಿಸುವುದೇ ಸೊಗಸು. ಇಲ್ಲಿಗೆ ಬಂದವರು ದಂಡೆಯಲ್ಲಿರುವ ಕೋದಂಡರಾಮ ದೇವಾಲಯಕ್ಕೆ ತೆರಳಿ ನಮಿಸುತ್ತಾರೆ.

## ಭರಚುಕ್ಕಿ

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ವಿಸ್ಮಯಗಳಲ್ಲೊಂದಿದು. ಕಾವೇರಿ ಹರಿಯುವ ಶಿವನಸಮುದ್ರದ ಪರಿಸರವಿದು. ರಭಸದಿಂದ ಧುಮ್ಮಿಕ್ಕುವ ಜಲಧಾರೆಯು ಗಾಳಿಯ ಜೊತೆ ಸೇರಿ ಬಂದವರಿಗೆ 'ಪನ್ನೀರು' ಬಿದ್ದಂತಹ ಅನುಭವ ನೀಡುತ್ತದೆ. ಮುಂಗಾರು ಬಿರುಸಾದಂತೆಲ್ಲಾ ಕಾವೇರಿ– ಕಪಿಲಾ ನದಿಯ ನೀರಿನ ಹರಿವಿನ ಮಟ್ಟ ಹೆಚ್ಚಾದಂತೆಲ್ಲಾ ಭರಚುಕ್ಕಿಯ ಸೌಂದರ್ಯ ಇಮ್ಮಡಿಯಾಗುತ್ತದೆ. ಪ್ರವಾಸಿಗರಿಗೆ ಹೆಚ್ಚಿನ ಮುದ ದೊರೆಯುತ್ತದೆ. ಹಚ್ಚ ಹಸುರಿನ ಗಿರಿ– ಕಂದರದ ನಡುವೆ ನೊರೆ ಹಾಲಿನಂತೆ ಧುಮ್ಮಿಕ್ಕುವ ಜಲಧಾರೆ ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಕೊಳ್ಳೇಗಾಲ ತಾಲ್ಲೂಕು ಕೇಂದ್ರದಿಂದ 15 ಕಿ.ಮೀ. ದೂರದಲ್ಲಿರುವ ಸತ್ತೇಗಾಲ ಈ ಜಲಪಾತ ಕೊರಕಲು– ಕಲ್ಲುಗಳ ನಡುವೆ ವಿಸ್ತಾರವಾಗಿ ಚಾಚಿಕೊಂಡಿದೆ. ಕವಲುಗಳಾಗಿ 100 ಅಡಿ ಆಳಕ್ಕೆ ಧುಮುಕುತ್ತದೆ. ಪ್ರವಾಸಿಗರು ಭರಚುಕ್ಕಿ ಜೊತೆಗೆ ಮುಸ್ಲಿಂ ದರ್ಗಾ, ಸುಪ್ರಸಿದ್ಧ ಶಿವನಸಮುದ್ರ ದೇವಸ್ಥಾನ, ಮಧ್ಯರಂಗ



ಕೊಡಗು ಜಿಲ್ಲೆ ಮಡಿಕೇರಿ ಸಮೀಪದ ಅಬ್ಬಿ ಫಾಲ್ಸ್ ಚೆಲುವು

ದೇವಾಲಯ ಹಾಗೂ ಕಾವೇರಿ ನದಿಯು ಹರಿಯುವ ಮುತ್ತತ್ತಿಗೂ ಭೇಟಿ ನೀಡುತ್ತಾರೆ. ಅವಳಿ ಜಲಪಾತಗಳಾದ ಗಗನಚುಕ್ಕಿ–ಭರಚುಕ್ಕಿ ನಡುವೆ 10 ಕಿ.ಮೀ. ಅಂತರವಿದೆ. ಎರಡೂ ಫಾಲ್ಸ್‌ಗಳ ಬಳಿಗೂ ಜನರು ಬರುತ್ತಾರೆ.

ಬೆಂಗಳೂರು, ಮಂಡ್ಯ, ರಾಮನಗರ ಮೊದಲಾದ ಕಡೆಗಳಿಂದ ಬರುವವರು ಕೊಳ್ಳೇಗಾಲಕ್ಕೆ ಬರಬೇಕಾಗಿಲ್ಲ. ಸತ್ತೇಗಾಲದ ಬಳಿ ಎಡಕ್ಕೆ ತಿರುಗಿ ಜಲಪಾತದತ್ತ ಸಾಗಬಹುದು. ಮೈಸೂರು ಕಡೆಯಿಂದ ಬರುವವರು ಕೊಳ್ಳೇಗಾಲಕ್ಕೆ ಬಂದೇ ಹೋಗಬೇಕು.

## ಸೂರೆಗೊಳ್ಳುವ ಗಗನಚುಕ್ಕಿ

ಇದು ಮಂಡ್ಯ ಜಿಲ್ಲೆಯ ವ್ಯಾಪ್ತಿಗೆ ಸೇರುವ ಜಲಪಾತ. ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ಹರಿಯುವ ಕಾವೇರಿ ನದಿ ಉಪ ನದಿಗಳೊಂದಿಗೆ ಸಂಗಮಗೊಂಡು ಕೆಆರ್‌ಎಸ್ ಜಲಾಶಯ ತಲುಪಿ ಬಳಿಕ ತಿ. ನರಸೀಪುರ ಬಳಿ ಕಬಿನಿ ಇತರ ಉಪನದಿಗಳೊಂದಿಗೆ ಸಂಗಮವಾಗುತ್ತವೆ. ಕಾವೇರಿ ತಾಯಿಯು ತನ್ನ ರೌದ್ರತೆಯಿಂದ ಬೆಟ್ಟಗುಡ್ಡ, ಕಾಡುಮೇಡನ್ನೆಲ್ಲಾ ಕ್ರಮಿಸಿ ಶಿವನಸಮುದ್ರ ತಲುಪುತ್ತಿದ್ದಂತೆಯೇ ಗಗನದೆತ್ತರದಿಂದ ಧುಮುಕಿ ಗಗನಚುಕ್ಕಿಯಾಗಿ ಹೆಬ್ಬಂಡೆಗಳ ಮೇಲೆ ಹಾಲ್ನೊರೆಯಾಗಿ ಕಂಗೊಳಿಸುತ್ತದೆ. ನೋಡುವವರ ಮನಸ್ಸಿಗೆ ಮುದ ನೀಡುವ ಈ ಜಲಧಾರೆಯು ಶಿವನಸಮುದ್ರದ ಮುಕುಟ ಮಣಿಯೂ ಹೌದು. ಶ್ವೇತವರ್ಣದ ಸೀರೆಯುಟ್ಟ ನವವಧುವಿನಂತೆ ಕಾವೇರಿ ಇಲ್ಲಿ ಕಂಗೊಳಿಸುತ್ತಾಳೆ.

## ಸುಂದರ ಹೊಗೇನಕಲ್


ಕರ್ನಾಟಕ ಮತ್ತು ತಮಿಳುನಾಡಿನ ಗಡಿ ಭಾಗದಲ್ಲಿರುವ ಈ ಜಲಪಾತವನ್ನು ಎರಡೂ ರಾಜ್ಯಗಳ ನೆಲದಲ್ಲಿ ನಿಂತು ವೀಕ್ಷಿಸಬಹುದಾಗಿದೆ. ವಿಶಾಲವಾಗಿ ಹರಿಯುವ ಕಾವೇರಿ ನದಿಯು ಇಲ್ಲಿ ಕಲ್ಲಿನ ಕೊರಕಲ ಕಂದಕಕ್ಕೆ ಧುಮ್ಮಿಕ್ಕಿ ಜಲಪಾತದ ಸ್ವರೂಪ ಪಡೆದಿದೆ. ಈಗ ಕಂಗೊಳಿಸುತ್ತಿದೆ.

ಸುತ್ತಲೂ ಬೆಟ್ಟಗಳ ರಾಶಿ, ಹಸಿರು ಸೌಂದರ್ಯದ ನಡುವೆ ಇರುವ ರಮಣೀಯ ಹೊಗೇನಕಲ್ ಜಲಪಾತ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಿಂದ 110 ಕಿ.ಮೀ ದೂರದಲ್ಲಿದೆ. ಪವಿತ್ರ ಯಾತ್ರಾಸ್ಥಳ ಮಹದೇಶ್ವರ ಬೆಟ್ಟದಿಂದ 48 ಕಿ.ಮೀ. ದೂರದಲ್ಲಿದೆ. ಬೆಂಗಳೂರಿನಿಂದ ಕೃಷ್ಣಗಿರಿ, ಧರ್ಮಪುರಿ ಮಾರ್ಗದ ಮೂಲಕವೂ (200 ಕಿ.ಮೀ. ದೂರ) ಈ ಜಲಪಾತಕ್ಕೆ ಭೇಟಿ ನೀಡಬಹುದು. ತೆಪ್ಪದಲ್ಲಿ ಹೋದರೆ (ನೀರು ಹೆಚ್ಚು ರಭಸದಿಂದ ಹರಿಯುವಾಗ ಅವಕಾಶವಿಲ್ಲ) ಜಲಧಾರೆಯ ವೈಭವವನ್ನು ಮತ್ತಷ್ಟು ಸಮೀಪದಿಂದ ಕಣ್ತುಂಬಿಕೊಳ್ಳಬಹುದು.

## ಅಬ್ಬಬ್ಬಾ ಅಬ್ಬಿ

ಕಾವೇರಿಯ ತವರಾದ ಕೊಡಗು ಜಿಲ್ಲೆಯ ಪ್ರಮುಖ ಜಲಪಾತವಿದು. ಹಲವು ರಮಣೀಯ ತಾಣಗಳಲ್ಲಿ ಮುಂಚೂಣಿಯಲ್ಲಿರುವುದೇ ಅಬ್ಬಿ ಜಲಪಾತ. ಇದನ್ನು ಕಂಡ ಪ್ರವಾಸಿಗರಲ್ಲಿ ಬಹುತೇಕರು 'ಅಬ್ಬಬ್ಬಾ' ಎಂದು ಹರ್ಷೋದ್ಗಾರ ತೆಗೆಯದೇ ಇರರು! ಮಡಿಕೇರಿ ನಗರದಿಂದ 10 ಕಿ.ಮೀ. ದೂರದಲ್ಲಿರುವ ಈ ತಾಣ ಪ್ರವಾಸಿಗರ ಪಾಲಿಗೆ ಸ್ವರ್ಗವೇ ಹೌದು. ಸುತ್ತಮುತ್ತಲೂ ದಟ್ಟವಾದ ಕಾಡು ಮರಗಳು ಹಾಗೂ ಕಾಫಿ ತೋಟದ ಮಧ್ಯೆ ಜೀರುಂಡೆಗಳ ಸಂಗೀತವನ್ನು ಕೇಳಿಸಿಕೊಳ್ಳುತ್ತಾ ಒಂದೊಂದೇ ಮೆಟ್ಟಿಲುಗಳನ್ನು ಇಳಿಯುತ್ತಾ ಸಾಗಿ, ಕೊನೆಯ ತಿರುವನ್ನು ದಾಟಿದರೆ ಈ 'ಜಲಸನ್ನಿಧಿ' ದರ್ಶನ ದೊರೆಯುತ್ತದೆ. ಸಣ್ಣಪುಟ್ಟ ಬಂಡೆಗಳ ಮೇಲಿನಿಂದ ಸುಮಾರು 30ರಿಂದ 40 ಅಡಿಗಳಷ್ಟು ಎತ್ತರದಿಂದ ಧುಮ್ಮಿಕ್ಕುತ್ತದೆ. ಇದು ಬೀಳುವ ರಭಸಕ್ಕೆ ನೀರು ತುಂತುರು ಹನಿಗಳಾಗಿ ಸಿಡಿಯುತ್ತಾ ಸೃಷ್ಟಿಸುವ 'ದೃಶ್ಯ ಕಾವ್ಯ' ಆಕರ್ಷಿಸುತ್ತದೆ.

ಆಕರ್ಷಣೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಇರುವ ಜಲಪಾತಗಳು, ಪ್ರವಾಸೋದ್ಯಮಕ್ಕೆ ಇಂಬು ಕೊಡುವ ತಾಣಗಳೂ ಹೌದು. ಇದಕ್ಕಾಗಿಯೇ ಸರ್ಕಾರವು 'ಜಲಪಾತೋತ್ಸವ' ಆಯೋಜಿಸಿ ಪ್ರವಾಸೋದ್ಯಮದೊಂದಿಗೆ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯ ಪ್ರಚಾರಕ್ಕೂ ಒತ್ತು ನೀಡುತ್ತಿದೆ. ಇವುಗಳ ಸೊಗಸಿನ ಮುಂದೆ ನಿಂತಾಗಲೆಲ್ಲಾ ಮನಸ್ಸಿನ ದುಗುಡಗಳೆಲ್ಲ ಧುಮ್ಮಿಕ್ಕಿ ಹರಿದು ಹೋದಂತಾದೀತು!



ಕೊಳ್ಳೇಗಾಲ ತಾಲ್ಲೂಕಿನ ಸುಪ್ರಸಿದ್ಧ ಭರಚುಕ್ಕಿ ಜಲಪಾತಕ್ಕೆ ಜೀವಕಳೆ ಬಂದಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ